**ಸಾಕ್ಷಿಯನ್ನು ದಿಃ 17.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತಕ್ಕೂ ಮೊದಲು ಕೂಲಿ ಕೆಲಸ ಮಾಡುತ್ತಿದ್ದೆ ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನಗೆ 74 ವರ್ಷ ವಯಸ್ಸು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ನಿಪಿ. 18 ರ ಪ್ರಕಾರ 1950 ರಲ್ಲಿ ಹುಟ್ಟಿರುತ್ತೇನೆ ಎಂದರೆ ಸರಿ. ಆ ಪ್ರಕಾರ ನನಗೆ ಹೆಚ್ಚು ವಯಸ್ಸಾಗುತ್ತದೆ ಎಂದರೆ ಸರಿಯಲ್ಲ. ನನಗೆ ಎಷ್ಟು ಆದಾಯ ಇದೆ ಎಂದು ಪ್ರಮಾಣ ಪತ್ರದಲ್ಲಿ ಬರೆಯಿಸಿರುತ್ತೇನೆ ಎಂದರೆ ಗೊತ್ತಿಲ್ಲ. ನನಗೆ ವರಮಾನ ಇಲ್ಲದೇ ಇರುವ ಕಾರಣ ನನಗೆ ವರಮಾನ ಎಷ್ಟಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತ ಯಾವಗ ಆಯಿತು ಎಂದು ದಿನಾಂಕ ನೆನಪಿಲ್ಲ. ನಾನು ಈಗ ಊರಿನಿಂದ ನ್ಯಾಯಾಲಯಕ್ಕೆ ಬಸ್ಸಿನಲ್ಲಿ ಬಂದು ನ್ಯಾಯಾಲಯಕ್ಕೆ ನಡೆದುಕೊಂಡು ಬಂದಿರುತ್ತೇನೆ. ಅಪಘಾತ ಪಡಿಸಿದ ವಾಹನ ಬಿಳಿ ಬಣ್ಣದ ಕಾರಾಗಿರುತ್ತದೆ. ನಾನು ಆ ದಿನ ಕಾರು ಸಂಖ್ಯೆ ನೋಡಿರುವುದಿಲ್ಲ. ಬೇರೆ ವಾಹನದಿಂದ ಅಪಘಾತ ಆಗಿರುವ ಕಾರಣ ನಾನು ಕಾರು ಸಂಖ್ಯೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಕಾರು ಚಾಲಕನು ನನಗೆ ಆಸ್ಪತ್ರೆಗೆ ಸೇರಿಸಿರುತ್ತಾನೆ. ಪಿರಿಯಾಪಟ್ಟಣ ಆಸ್ಪತ್ರೆಗೆ ನನ್ನ ಮೊಮ್ಮಗಳು ಶ್ವೇತಾ ಕರೆದುಕೊಂಡು ಹೋಗಿರುತ್ತಾಳೆ ಎಂದು ನಿಪಿ. 15 ರಲ್ಲಿ ದಾಖಲಾಗಿದೆ ಎಂದರೆ ಸರಿ. ಕಾರು ಚಾಲಕ ಕರೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 15 ರಲ್ಲಿ ಕಾರು ಸಂಖ್ಯೆ ಕಾರಿನ ಬಣ್ಣ ನಮೂದಾಗಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಪಿರಿಯಾಪಟ್ಟಣ ಆಸ್ಪತ್ರೆಯಿಂದ ಮೈಸೂರಿನ ಡಿ.ಆರ್.ಎಂ ಆಸ್ಪತ್ರೆಗೆ ಬಂದಿರುತ್ತೇನೆ. ನಿಪಿ. 15 ರಲ್ಲಿ ರಸ್ತೆ ಮಧ್ಯದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅನ್ನೋನ್ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗಿದ್ದೆ ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 14 ರಲ್ಲಿ ಕಾರು ಸಂಖ್ಯೆ ಕಾರಿನ ಬಣ್ಣ ನಮೂದಾಗಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಡಿ.ಆರ್.ಎಂ

ಆಸ್ಪತ್ರೆಯಿಂದ ಪುನಃ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಆಸ್ಪತ್ರೆಯ ಹೆಸರು ನೆನಪಿಲ್ಲ. ಡಿ.ಆರ್.ಎಂ ಆಸ್ಪತ್ರೆಯಲ್ಲಿ ಒಂದು ವಾರ ದಾಖಲಾಗಿದ್ದೆ. ಪಿರಿಯಾಪಟ್ಟಣ ಆಸ್ಪತ್ರೆಯ ಎಂ.ಎಲ್.ಸಿ. ದಾಖಲೆ, ಡಿ.ಆರ್.ಎಂ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಹಾಜರು ಪಡಿಸುತ್ತೇನೆ ಎಂದು ಉತ್ತರಿಸಿರುತ್ತಾರೆ. ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 16 ಕಾರು ಸಂಖ್ಯೆ ಕಾರಿನ ಬಣ್ಣ ನಮೂದಾಗಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ.

ದೂರನ್ನು ನನ್ನ ಮಗಳು ದಾಖಲಿಸಿರುತ್ತಾರೆ. ಜ್ಯೋತಿ ಮಗಳು ಶ್ವೇತಾ ನನ್ನ ಮೊಮ್ಮಗಳು ಇರುತ್ತಾರೆ. ದೂರುದಾರರಾದ ಜ್ಯೋತಿ ಮತ್ತು ಶ್ವೇತಾ ಅಪಘಾತವನ್ನು ನೋಡಿರುವುದಿಲ್ಲ. ದೂರನ್ನು ಎರಡು ದಿನ ತಡವಾಗಿ ನೀಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ನಿಪಿ. 4 ರಲ್ಲಿ ಫುಟ್ ಪಾತ್ ಇದ್ದರೂ ಕೃತ್ಯ ಸ್ಥಳವನ್ನು ರಸ್ತೆಯಲ್ಲಿ ಕಾಣಿಸಿರುತ್ತಾರೆ ಎಂದರೆ ಇಲ್ಲ ಎಂದು ಉತ್ತರಿಸಿರುತ್ತಾರೆ. ಬೇರೆ ಯಾವುದೋ ಒಂದು ವಾಹನದಿಂದ ಅಪಘಾತ ಆಗಿದ್ದರೂ ಸಹ ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಎ.ಆರ್. ಆಸ್ಪತ್ರೆಯಲ್ಲಿ 15 ದಿನ ದಾಖಲಾಗಿದ್ದೆ. ವೈಧ್ಯರ ಹೆಸರು ಗೊತ್ತಿಲ್ಲ. ಅಪಘಾತದಿಂದ ಯಾವುದೇ ಗಾಯ ಆಗಿರದೇ ಇದ್ದು ನಾನು ಯಾವುದೇ ಚಿಕಿತ್ಸೆ ಪಡೆದುಕೊಳ್ಳದೇ ಇರುವ ಕಾರಣ ವೈಧ್ಯರ ಹೆಸರು ಗೊತ್ತಿಲ್ಲ ಎಂದು ಉತ್ತರಿಸಿರುತ್ತೀರಿ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಆಸ್ಪತ್ರೆಗೆ ಸೇರಿಸಿದ ಕಾರಣ ನನಗೆ ಗೊತ್ತು. ಸದರಿಯವರು ಆಸ್ಪತ್ರೆಗೆ ಸೇರಿಸಿದ ಬಗ್ಗೆ ದಾಖಲೆ ಇಲ್ಲದೇ ಇರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಪರಿಚಯ ಇರುವ ಕಾರಣ ನನಗೆ ಸಹಾಯ ಆಗಲಿ ಎಂದು ಸದರಿಯವನ ಕಾರನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾನೆ ಎಂದರೆ ಸರಿಯಲ್ಲ. ಅಮಾನತು ಮಹಜರ್ ಪೋಲೀಸ್ ಠಾಣೆಯ ಆವರದಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಲಂ 133 ರ ನೋಟೀಸ್ ಹಾಜರು ಪಡಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ಸದರಿ ನೋಟೀಸ್

ಜಾರಿ ಮಾಡುವ ಒಂದು ದಿನ ಮೊದಲೇ ಕಾರು ಠಾಣಾ ಆವರಣದಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಸುಳ್ಳು ದಾಖಲೆಗಳನ್ನು ಸೃಷಿಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾಖಲೆಗಳ ಪ್ರಕಾರ ದಿಃ 10.12.2023 ರಂದು ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಹೆಂಡತಿ ಯಾವಾಗ ಮೃತಪಟ್ಟಿರುತ್ತಾರೆ ಎಂದು ದಿನಾಂಕ ನೆನಪಿಲ್ಲ. ಅಪಘಾತ ಆಗಿ ಆರು ತಿಂಗಳ ನಂತರ ನನ್ನ ಹೆಂಡತಿ ಮೃತಪಟ್ಟಿರುತ್ತಾರೆ. ಅಪಘಾತ ಗಾಯದಿಂದ ಸದರಿಯವರು ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮೃತಳ ಆದಾಯದ ಮೇಲೆ ನಾವು ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಮೃತಳು ಯಾವುದೇ ಆದಾಯ, ಉದ್ಯೋಗ ಇರಲಿಲ್ಲ ಎಂದರೆ ಸರಿಯಲ್ಲ. ಮೃತಳ ಆಧಾರ್ ಕಾರ್ಡ್ ಪ್ರಕಾರ 1960 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ಎಲ್ಲಾ ದಾಖಲೆಗಳನ್ನು ಸೃಷಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.